ಅಜಿತಸೇನಾಚಾರ್ಯರ ದರ್ಶನ ಮಾಡಿ ಬಂದಮೇಲೆ ಅತ್ತಿಮಬ್ಬೆಯ ಉತ್ಸಾಹ ಇಮ್ಮಡಿಸಿತು .ಮನುಷ್ಯನ ಆಯುಸ್ಸು ಎಂದು ಮುಗಿಯುವುದೋ ಏನೋ ಅಷ್ಟರಲ್ಲಿ ಕಾರ್ಯಗಳನ್ನೆಲ್ಲ ಮಾಡಿ ಮುಗಿಸಿ ನಗುನಗುತ್ತ ಹೊರೆಡಬೆಕೆಂದು ಈಕೆ ಸಂಕಲ್ಪ ಮಾಡಿದಳು. ಕನ್ನಡದಲ್ಲಿ ಯಾರೇ ಬರೆಯಲಿ ಜಾತಿ ಮತ ದೇಶ ಇವನ್ನು ನೋಡದೆ ಉತ್ತಮ ಗ್ರಂಥಗಳನ್ನೆಲ್ಲ ತಾನು ಸಹಸ್ರ ಸಹಸ್ರವಾಗಿ ಪ್ರತಿಮಾಡಿಸುವೆನೆಂದು ಪಣತೊಟ್ಟಳು. ತನ್ನ ಇಂಗಿತವನ್ನು ಕರ್ನಾಟಕದ ವಿದ್ವಾಂಸರಲ್ಲಿ ಸಾರಿಹೇಳಿದಳು.

“ಕಾಲಕ್ಕೆ ತಕ್ಕಂತೆ ನಿಮ್ಮ ಸಂಪ್ರದಾಯಗಳನ್ನು ಅಲ್ಪ ಸ್ವಲ್ಪ ಮಾರ್ಪಡಿಸಿಕೊಳ್ಳ ಬೇಕು. ಗೀರ್ವಾಣ ಭಾಷೆಯ ಮೇಲೆ ವ್ಯಾಮೋಹವಿಟ್ಟುಕೊಂಡು ಪ್ರಾಂತ ಭಾಷೆಯ ಬೆಳವಣಿಗೆಗೆ ಕಂಟಕ ಒಡ್ಡಬಾರದು. ಜನಕ್ಕೆ ತಿಳಿವ ಅವರವರ ಭಾಷೆಯೇ ಅವರಿಗೆ ಗೀರ್ವಾಣ ಭಾಷೆ !” ಎಂದು ವಿದ್ವಾಂಸರ ಮಂಡಲಿಯಲ್ಲಿ ಅತ್ತಿಮಬ್ಬೆ ಘೋಷಿಸಿದಳು. ಕನ್ನಡ ಸಾಹಿತಿಗಳ ತಾಪತ್ರಯಗಳನ್ನೆಲ್ಲ ತಾನು ಹೊರೆವುದಾಗಿ ಆಶ್ವಾಸನೆ ಯಿತ್ತಳು. ವಿದ್ವಾಂಸರು ಮುಂದೆ ಬಂದು ನಾಡ ನುಡಿಯಲ್ಲಿ ಕಾವ್ಯಗಳನ್ನೂ ಶಾಸ್ತ್ರ ಗಳನ್ನೂ ಬರೆದು ನಾಡಿನ ಋಣ ತೀರಿಸಬೇಕೆಂದು ಆದೇಶವಿತ್ತಳು. ಅಂದು ಕನ್ನಡ ದಲ್ಲೇ ಬರೆಯುತ್ತಿದ್ದ ವಿದ್ವಾಂಸರನ್ನೆಲ್ಲ ಈಕೆ ಕರೆಸಿ ರಾಜಮಹಾರಾಜರೂ ನಾಚುವಂತೆ ಸನ್ಮಾನಿಸಿದಳು !ಕನ್ನಡ ನಾಡಿನಲ್ಲೆಲ್ಲ ಈಕೆ ಬಿರುಗಾಳಿಯಾಗಿ ಸ್ತುತಿ ಸಂಸ್ಕೃತಿ ಪ್ರಸಾರ ಮಾಡಿದಳು. ಹಿಂದೂ ದೇವಾಲಯಗಳಿಗೂ, ಬೌದ್ಧ ವಿಹಾರಗಳಿಗೂ ದಾನಧರ್ಮ ಮಾಡಿ ಚತುಸ್ಸುಮಯ ಸಂರಕ್ಷಕಳಾಗಿ ಅತ್ತಿಮಬ್ಬೆ ಕನ್ನಡ ಸಂಸ್ಕೃತಿಯ ಸಂಪನ್ನತೆಗೆ ಸಾಕ್ಷಿಯಾದಳು !

ರಾಷ್ಟ್ರಕೂಟರ ಪತನಾನಂತರ ಮಾಳವದರಸರು ತಮಗೆ ತಾವೇ ಸ್ವತಂತ್ರರಾದರು. ಹಿಂದೆಲ್ಲ ರಾಷ್ಟ್ರಕೂಟರಿಗೆ ಅಧೀನರಾಗಿದ್ದ ಇವರು ದಿನಕಳೆದಂತೆ ಪ್ರಾಬಲರಾದರು. ಉತ್ತರದಲ್ಲಿ ರಾಷ್ಟ್ರಕೂಟರಿಗೆ ಸೇರಿದ್ದ ಬಹುಭಾಗವನ್ನು ಮಾಳವದ ಪರಮಾರರು ಆಕ್ರಮಿಸಿಕೊಂಡು ಆಗಾಗ ಕನ್ನಡ ರಾಜ್ಯಕ್ಕೂ ನುಗ್ಗಿ ಹಾವಳಿ ಮಾಡಿದವರು .ತೈಲಪಹತ್ತಾರು ಬಾರಿ ಅವರನ್ನೆದುರಿಸಿ ಸೋತು ಸುಣ್ಣುವಾಗಿದ್ದನು.ಕೊನೆಗೆ ತನ್ನ ಮಗನಾದ ಇರಿವಬೆಡಂಗನ ಕೈಲಿ ಸೇನೆಯನ್ನು ಕೊಟ್ಟು ಉತ್ತರಕ್ಕೆ

ಕಳಿಸುವನು. ಇರಿವಬೆಡಂಗ ಹೋಗುವ ಮುನ್ನ ಅತ್ತಿಮಬೆಯನ್ನು ಕಂಡು ಅಶೀವಾದ ಪಡೆಯಲು ಬಂದನು. ದಲ್ಲಪ ಮತ್ತು ಮಲ್ಲಪ ಇಬ್ಬರೂ ಕೈಕಟ್ಟಿ ನಿಂತುಕೊಂಡು ಚಕ್ರವರ್ತೀಕುಮಾರನನ್ನು ಸ್ವಾಗತಿಸಿದರು.

"ಅಕ್ಕ .ನಾನು ಯುದ್ಧಕ್ಕೆ ಹೊರಟಿರುವೆನು. ಸ್ವತಂತ್ರವಾಗಿ ನಾನು ಯುದ್ಧಕ್ಕೆ ಧುಮ್ಮಿಕ್ಕಿರುವುದು ಇದೇ ಮೊದಲ ಬರಿ. ಖ಼ಮ್ಮ ಆಶೀರ್ವಾದ ಪಡೆದು ಹೋಗಲು ಬಂದಿರುವೆನು " ಎನ್ನುತ್ತ ಇರಿವಬೆಡಂಗ ಅತ್ತಿಮಬ್ಬೆಯ ಕಾಲಿಗೆರಗಿ ಪಾದಧೂಳಿಯನ್ನು ಕಣ್ಣಿಗೊತ್ತಿಕೊಂಡನು.

"ಮಗು ,ನಿನಗೆ ನನ್ನ ಆಶೀರ್ವಾದೇ ? ನನಗೇಕೋ ಯುದ್ಧಕ್ಕೆ ಹೊರಟವರಿ ಆಶೀರ್ವಾದ ಮಾಡಲು ಭಯವಾಗುವುದು !" ಎಂದು ಅತ್ತಿಮಬ್ಬೆ ಹಿಂದೇಟು ಹಾಕಿದಳು.

"ಅಕ್ಕ ,ತಮ್ಮನ್ನು ನಮ್ಮ ನಾಡಿನವರೆಲ್ಲ ದೇವತೆಯೆಂದೇ ಪರಿಗಣಿಸಿರುವರು ! ತಮ್ಮ ಆಶೀರ್ವಾದ ವಜ್ರಕವಚವಿದ್ದಂತೆ ! ತಮ್ಮ ಕೈಯಲ್ಲಿ ಸಂಜೀವಿನಿಯಿದೆ ತಮ್ಮ ಕೃಪಾಕಟಾಕ್ಷದಲ್ಲಿ ಹೆಣಕ್ಕೆ ಪ್ರಾಣದಾನ ನೀಡುವ ಶಕ್ತಿಯಿದೆ !"

"ಮಗು, ನನ್ನಲ್ಲಿ ಏನಿದೆ ಎಂಬುದನ್ನು ನಾನು ತಿಳಿದಿದ್ದೇನೆ. ಜೋಯಿಸರ ಮಗಳೇ ಮುಂಡೆಯಾಗುವಳು ! . . . . .ನನ್ನಲ್ಲಿ ಕಿಂಚತ್ತಾದರೂ ಶಕ್ತಿಗಿಕ್ತಿ ಇದ್ದಿದ್ದರೆ ನನ್ನ ಪ್ರಾಣೇಶನನ್ನು ಕಳೆದುಕೊಳ್ಳುತ್ತಿದ್ದೆನೆ, ನನ್ನ ಬೆನ್ನಿಗೆ ಬಿದ್ದ ತಂಗಿಯನ್ನು ಅಗ್ನಿಯ ಸುಪ್ಪತ್ತಿಗೆಯ ಮೇಲೆ ಮಲಗಲು ಬಿಡುತ್ತಿದ್ದೆನೇ ? ಯಾರೋ ಮೌಢ್ಯದಿಂದ ನನ್ನನ್ನು ದೇವತೆಯನ್ನಾಗಿ ಮಾಡಿ ಕಥೆ ಹಬ್ಬಿಸಿರುವರು. ದೇವರ ಮೇಲೆ ಭಾರಹಾಕಿ ಹೋಗಿ ಬಾ."

"ತಾವು ನನ್ನ ತಲೆ ಮುಟ್ಟಿ ಗೆದ್ದು ಬಾ ಎಂದು ಹಾರೈಸಬೇಕು ಆಕ್ಕ" ಎಂದು ಮತ್ತೊಮ್ಮೆ ಇರಿವಬೆಡಂಗ ಆಕೆಯ ಪಾದಕ್ಕೆ ಬಿದ್ದನು. ಆತ್ತಿಮಬ್ಬೆಯ ಮನಸ್ಸು ಕರಗಿತು.

"ಮಗು, ಧರ್ಮದಿಂದ ಯುದ್ಧ ಮಾಡು. ಯಾವ ಪ್ರಲೋಭಕ್ಕೂ ಬೀಳದೆ ಶೌರ್ಯ ಲಕ್ಷ್ಮಿಯ ಉಪಾಸಕನಾಗು. ಹೋಗಿ ಗೆದ್ದು  ಬಾ" ಎಂದು ಮನಸಾರೆ ಹರಸಿದಳು. ಸ್ಪರ್ಶಮಣಿಗೆ ತಾಕಿದ ಕಬ್ಬಿಣದಂತೆ ಇರಿವಬೆಡಂಗ ಹಿಗಿಹೋದನು. ಅಲ್ಲೇ ಕುಳಿತಿದ್ದ ರನ್ನನ ಕಡೆ ತಿರುಗಿ

“ಮಹಾಕವಿಗಳನ್ನೂ ಸ್ವಾಗತಿಸುತ್ತಿರುವೆನು. ರಣರಂಗವನ್ನು ತಾವು ಕಣ್ಣಾರೆ ಕಾಣಬೇಕು” ಎಂದು ರನ್ನನನ್ನೂ ಆಹ್ವಾನಿಸಿದನು.

“ನಮ್ಮ ರನ್ನಕವಿ ಕೋಣೆಯಲ್ಲಿ ಕುಳಿತು ಬರೆವ ಬಣಗು ಕವಿಯಲ್ಲ. ಸಮರಪಶು ರಾಮರ ಪಟ್ಟದ ಶಿಷ್ಯ ! ಪರಶುರಾಮಚರಿತೆಯೆಂಬ ರಣಗಬ್ಬವನ್ನು ಬರೆದು ಕೃತ ಕೃತ್ಯನಾಗಿರುವ ರನ್ನನಿಗೆ ಸಮರಲೋಕ ಹೊಸದೇನಲ್ಲ ” ಎಂದು ಅತ್ತಿಮಬ್ಬೆ ರನ್ನನನ್ನು ಕೊಂಡಾಡಿದಳು.

“ಅಕ್ಕ ,ಇವರ ಪರುಶುರಾಮಚರಿತೆಯನ್ನು ಓದಿರುವೆನು, ರಕ್ತಕುದಿಯುವಂತಿದೆ. ಇಂಥ ಕವಕೇಸರಿ ನಮ್ಮೊಡನೆ ಇದ್ದರೆ ರಣರಂಗವೂ ರಸದಾಗರವಾಗದಿರದು. ನಾನು ಇಲ್ಲಿಗೆ ಬಂದುದು ಎರಡು ಮಹತ್ಕಾರ್ಯಕ್ಕಾಗಿ. ಮೊದಲನೆಯದಾಗಿ ತಮ್ಮ ಆಶೀರ್ವಾದ ಬೇಕಾಗಿತ್ತು. ಎರಡನೆಯದು ಈ ಮಹಾಕವಿಯನ್ನು ನನ್ನೊಡನೆ ಕರೆದು ಕೊಂಡು ಹೋಗಬೇಕೆಂದೇ ಬಂದೆನು.”

“ರನ್ನ ,ಚಕ್ರವರ್ತಿಯ ಆಹ್ವಾನವನ್ನು ಸ್ವೀಕರಿಸುವೆ ತಾನೆ ?” ಎಂದು ಅತ್ತಿಮಬ್ಬೆ ರನ್ನನ ಕಡೆ ತಿರುಗಿ ಕೇಳಿದಳು.

“ತಾವು ಹರಸಿ ಕಳುಹಿಸಿ ಕೊಟ್ಟರೆ ಚಕ್ರವರ್ತಿಗೊಳೊಡನೆ ಹೋಗಿ ಬರುವೆನು” ಎಂದು ರನ್ನ ಭಾರವನ್ನೆಲ್ಲ ಅತ್ತಿಮಬ್ಬೆಯ ಮೇಲೆ ಹೇರಿದನು.

“ರನ, ಮನೆಯ ಬಾಗಿಲಿಗೇ ಭಾಗ್ಯದೇವತೆ ಬಂದು ಕರೆಯುತ್ತಿರುವಳು .ಹೋಗಿ ಬಾ. ರಣರಗಂದಲ್ಲೂ ಏನಾದರೂ ಬರೆದು ಬಿಡು” ಸೂಚನೆಕೊಟ್ಟು ಕಳುಹಿಸಿ ಕೊಟ್ಟಳು.

ಪರಮಾರರಿಗೂ ಇರಿವಬೆಡಂಗನಿಗೂ ಯುದ್ಧ ತಿಂಗಳಾನುಗಟ್ಟಲೆ ನಡೆಯಿತು. ರನ್ನ ಶಸ್ತ್ರಧಾರಿಯಾಗಿ ನುಗ್ಗಲು ಇರಿವಬೆಂಡಗ ಒಪ್ಪಲಿಲ್ಲ. ರಣರಂಗದಲ್ಲಿ ಇವನು ರಾಜ, ಇವನು ಮಂತ್ರಿ, ಇವನು ಕವಿ ಎಂದು ನೋಡಿಕೊಂಡು ಯುದ್ಧ ಮಾಡು ನೋಡಿಸುವುದು ಹೇಗೆ ?ನೀವು ಹಾಯಾಗಿ ಕುಳಿತುಕೊಳ್ಳಿ .ಬೇಕಿದ್ದರೆ ದೂರದಿಂದ ಯುದ್ಧವನ್ನು ನೋಡಿಕೊಂಡು ಮುಂದಣ ಕಾವ್ಯದಲ್ಲಿ ಅದನ್ನು ಬಣ್ಣಿಸಿ ಬಿಡಿ” ಎಂದು ರನ್ನನನ್ನು ಸುಮ್ಮನೆ ಕೂರಿಸಿದನು.

ಯುದ್ಧ ಮುಗಿದಾಗ ರನ್ನನ ಗದಾಯುದ್ಧವೂ ಮುಗಿದಿತ್ತು. ತನ್ನ ಕೃತಿಗೆ ‘ಸಾಹಸ ಭೀಮವಿಜಯ’ ವೆಂದು ಮಹಾಕವಿ ಹೆಸರಿಟ್ಟನು. ಇರಿವಬೇಡಂಗನನ್ನು ಸಾಹಸ ಭೀಮನೆಂದು

ಕಾವ್ಯದುದ್ದಕ್ಕೂ ಕೊಂಡಾಡಿದನು. ದುರ್ಯೋಧನನ ಪಾತ್ರದಲ್ಲಿ ನವೇನತೆಯನ್ನು ತಂದು ಅವನ ಛಲವನ್ನೂ. ಸ್ನೇಹವನ್ನೂ ಅದ್ವಿತೀಯವಾಗಿ ಚಿತ್ರಿಸಿ ಸ್ವಾಭಿಮಾನದ ಒಪ್ಪ ಹಾಕಿ ರನ್ನಕವಿ ಗದಯುದ್ಧವನ್ನು ಇರಿವಬೆಡಂಗನಿಗೆ ಅರ್ಪಿಸಿದನು.

ಚಾಲುಕ್ಯ ಚಕ್ರವರ್ತಿ ತೈಲಪ ತನ್ನ ಮಗನ ಯುದ್ಧಚಾತುರ್ಯವನ್ನು ರನ್ನನ ಗದಾ ಯುದ್ಧದಲ್ಲಿ ಕಂಡು ಬೆರಗಾದನು. ರನ್ನ ಕವಿಯನ್ನು ಕವಿಚಕ್ರವರ್ತೀಯೆಂದು ಈ ಕನ್ನಡ ಚಕ್ರವರ್ತೀ ಕೊಂಡಾಡಿದನು ! ಕನಕಂದಂಡ, ಕನಕಚಾಮರ, ಆನೆ ,ಕುದುರೆ ಈ ರಾಜ ಮರ್ಯಾದೆಗಳು ರನ್ನ ಮಹಾಕವಿಗೆ ಲಭಿಸಿದವು. “ಬತ್ತಗ್ರಾಮ” ಎಂಬ ಊರನ್ನು ರನ್ನನಿಗೆ ಅಗ್ರಹಾರವಾಗಿ ಚಾಲುಕ್ಯ ಚಕ್ರವರ್ತೀ ಶಾಸನ ಹಾಕಿ ಕೊಟ್ಟನು. ರನ್ನಕವಿ ತನ್ನ ಸನ್ಮಾನಗಳನ್ನೆಲ್ಲ ತಂದು ಅತ್ತಿಮಬ್ಬೆಯ ಪದತಲದಲ್ಲಿಟ್ಟು ಅಡ್ಡಬಿದ್ದನು. ಗದ್ಗದನಾಗಿ “ಅಮ್ಮಾಜಿ, ನೀನು ಸಾಕಿ ಬೆಳಸಿದ ಮಗು ನಾನು. ಈ ಸನ್ಮಾನಗಳೆಲ್ಲ ತಮ್ಮವೇ ! ತಮ್ಮ ಒಂದು ಪಾದಧೂಳಿಗೂ ಮಹಾಸಾಮ್ರಾಜ್ಯ ಸಮತೂಗಲಾರದು ! ನನಗೆ ಹಿತ ತಮ್ಮ ಒಂದು ಪಾದಧೂಳಿಗೂ ಮಹಾಸಾಮ್ರಾಜ್ಯ ಸಮತೂಗಲಾರದು !ನನಗೆ ಹಿತವಾದುದು ಈ ಬಿರುದುಬಾವಲಿಗಳೊಂದೂ ಅಲ್ಲ. ತಮ್ಮ ಪಾದಧೂಳಿಯೇ ನನ್ನ ಹಾಸಿಗೆ, ನನ್ನ ಹೊದಿಕೆ !” ಎಂದು ರನಕವಿ ಭಾವಾವೇಶದಿಂದ ನುಡಿದನು.

“ರನ್ನ, ನೀನು ಎಷ್ಟುಷ್ಟು ಪ್ರಖ್ಯಾತಿಗೆ ಬರುವೆಯೋ ಅಷ್ಟುಷ್ಟೂ ನನ್ನ ಉತ್ಸಾಹ ಹೆಚ್ಚುವುದು. ಈಗ ನೀನು ರಚಿಸಿರುವ ಕಾವ್ಯಗಳೆಲ್ಲ ಅಳಿಮಾನಸರ ಕೊಂಡಾಟದ ಕಾವ್ಯಗಳು ! ಪ್ರಖ್ಯಾತಿಗೆ ಬರಲು ಹಾತೊರೆದೆ, ಇನ್ನು ಕೀರ್ತಿ ಸಾಕು. ಅತ್ಮೋದ್ಧಾರ ವಾಗುವ ಮಹಾಕಾವ್ಯದ ಕಡೆ ಗಮನ ಹರಿಸು. ತೀರ್ಥಂಕರ ಪರಮದೇವರ ಪಾದಾರವಿಂದವೆ ನನಗೂ ನಿನಗೂ ಲೋಕಕ್ಕೂ ಹಿತಕಾರಿಯಾದುದು ! ‘ತೀರ್ಥಂಕರ ಚರಿತೆ’ಯನ್ನು ನೀನು ಬರೆದು ತರಬೇಕು. ಆಗ ನಿನಗೆ ನಾನು ಇನ್ನೊಂದು ಬಿರುದು ಕೊಡುವೆನು ” ಎಂದು ಅತ್ತಿಮಬ್ಬೆ ತಿಳಿಸಿದಳು.

“ಅಮ್ಮಾಜಿ, ತಮ್ಮ ಹರಕೆಯಿದ್ದರೆ ಸಾಕು. ತೀರ್ಥಂಕರ ಪುರಾಣವನ್ನೂ ಬರೆಯುವೆನು. ಇನ್ನು ಮುಂದೆ ಯಾವ ರಾಜನನ್ನೂ ನಾನು ಹೊಗಳುವುದಿಲ್ಲ. ಬರೆದರೆ ಜಿನೇಂದ್ರನ ಮೇಲೆ ಬರೆಯುತ್ತೇನೆ ಇಲ್ಲವೇ ಜಿನಭಕ್ತರ ಮೇಲೆ ಬರೆಯುತ್ತೇನೆ” ಎಂದು ರನ್ನಕವಿ ಶಪಥ ಮಾಡಿದನು.

ಪಡೆಯೆಡೆಯ ಕಡೆಯ ಬಡವರ್
ಕುಡೆ ಪಡೆದನೊ ಚಕ್ರವರ್ತಿಯೊಳ್ ತೈಲಪನೊಳ್
ಪಡೆದಂ ಮಹಿಮೋನ್ನತಿಯಂ
ಪಡೆದಂ ಕವಿಚಕ್ರವರ್ತೀವೆಸರಂ ರನ್ನಂ

ಕವಿಮುಖಚಂದ್ರಂ ಕವಿಚ
ಕ್ರವರ್ತಿ ಕವಿರಾಜಶೇಖರಂ ಕವಿರಾಜಂ
ಕವಿಜನಚೂಡಾರತ್ನಂ
ಕವಿತಿಲಕಂ ಕವಿಚತುರ್ಮುಖಂ ಕವಿರತ್ನಂ